**<u>ಸಾಕ್ಷಿದಾರರನ್ನು ದಿನಾಂಕಃ 01.03.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ MNR ರವರಿಂದಃ</u>**

1 ನೇ ಪ್ರತಿವಾದಿಯೂ ಸಹ ನನ್ನ ಮತ್ತು ಪಿ.ಡಿ.ಒ , ಹಾಲನಹಳ್ಳಿ ಗ್ರಾಮ ಪಂಚಾಯಿತಿಯವರ ವಿರುದ್ಧ ದಾವೆ ಮಾಡಿರುತ್ತಾರೆ ಎಂದರೆ ಸರಿ . ಸದರಿ ದಾವಾ ಸಂಃ 219/2015 ರಲ್ಲಿ ನಾನು ಈಗಾಗಲೆ ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿ . ಸದರಿ ದಾವೆಯಲ್ಲಿರುವ ಅಂಶಗಳನ್ನು ನಾನು ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ಜಂಜರ್ ನಂಬರ್ 109, ಆಸ್ತಿ ನಂಬರ್ 109 ರ ಆಸ್ತಿಯು ಬಸಪ್ಪರವರಿಗೆ ಸೇರಿದ ಆಸ್ತಿ ಎಂದರೆ ಸರಿಯಲ್ಲ. ಬಸಪ್ಪರವರಿಗೆ ಸದರಿ 109 ರ ಆಸ್ತಿಯು ಸೇರಿಲ್ಲ ಎಂದು ತಾವು ಹೇಳಿದ್ದು, ಬೇರೆಯವರಿಗೆ ಸೇರಿರುತ್ತದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿಯುಇಲ್ಲ ಎನ್ನುತ್ತಾರೆ. ನಾನು ನಾಲ್ಕನೇ ತರಗತಿ ವರೆಗೆ ಓದಿರುತ್ತೇನೆ . ನಾನು ಕನ್ನಡದಲ್ಲಿ ಸಹಿ ಮಾಡುತ್ತೇನೆ. ಇಂಗ್ಲೀಷ್ ನಲ್ಲಿ ಮಾಡುವುದಿಲ್ಲ.

2 ನೇ ಪ್ರತಿವಾದಿ ಬಸಪ್ಪನ ಮಕ್ಕಳು 3 ರಿಂದ 5 ಪ್ರತಿವಾದಿಗಳು ಎಂದರೆ ಸರಿ. 2 ರಿಂದ 5 ನೇ ಪ್ರತಿವಾದಿಯರು ದಿಃ 31.03.2000 ನೇ ಇಸವಿಯಲ್ಲಿ ಆಸ್ತಿ ನಂಬರ್ 109 ನ್ನು 1 ನೇ ಪ್ರತಿವಾದಿಗೆ ಕ್ರಯ ಮಾಡಿರುತ್ತಾರೆ ಎಂದರೆ ಸರಿ. ಖರೀದಿ ಮಾಡಿದ ದಿನದಿಂದ 1 ನೇ ಪ್ರತಿವಾದಿಯೇ ಆಸ್ತಿ ನಂಬರ್ 109 ರಲ್ಲಿ ಸ್ವಾಧೀನಾನುಭೋಗ ಇರುತ್ತಾರೆ ಎಂದರೆ ಸಾಕ್ಷಿಯು ನನಗೆ ಸೇರಿದ ಆಸ್ತಿ ನಂಬರ್ 109/ ಎ ನಲ್ಲಿ ನಾನು ಸ್ವಾಧೀನ ಇರುತ್ತೇನೆ. ಆಸ್ತಿ ನಂಬರ್ 109 ರಲ್ಲಿ 1 ನೇ ಪ್ರತಿವಾದಿ ಸ್ವಾಧೀನ ಇರುತ್ತಾರೆ ಎಂದು ನುಡಿಯುತ್ತಾರೆ.

ಅಸಲು ದಾವಾ ಸಂಃ 219/2015 ರಲ್ಲಿ ನಾನು 3 ನೇ ಪ್ರತಿವಾದಿ ರುದ್ರಪ್ಪನನ್ನು ನನ್ನಪರ ಸಾಕ್ಷಿದಾರರನ್ನಾಗಿ ಸಾಕ್ಷಿ ಪ್ರಮಾಣ ಪತ್ರ ಹಾಕಿಸಿರುತ್ತೇನೆ ಎಂದರೆ ಸರಿ. ದಿಃ 31.03.2000 ನೇ ಇಸವಿಯಲ್ಲಿ ಆಸ್ತಿ ನಂಬರ್ 109, 1 ನೇ ಪ್ರತಿವಾದಿಯ ಹೆಸರಿಗೆ ಕ್ರಯ ಆಗಿರುವುದನ್ನು ತಾವು ಪ್ರಶ್ನೆ ಮಾಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ.

109 ರ ಆಸ್ತಿಯು ಭಾಗ ಆಗಿರುವ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು ಪಾಲುಪಾರಿಕತ್ ಹಾಜರು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ಪಾಲುಪಾರಿಕತ್ ಹಾಜರು ಮಾಡಿರುತ್ತೇನೆ ಎಂದು ತಾವು ಈಗ ಹೇಳಿದ್ದು ಸಾಕ್ಷಿಯು ಹಾಜರು ಮಾಡಿರುವ ದಾಖಲೆಗಳನ್ನು ತೋರಿಸಿ ಎಲ್ಲಿ ಪಾಲುಪಾರಿಕತ್ ಇದೆ ಎಂದು ತೋರಿಸಿ ಎಂದು ಕೇಳಲಾಗಿ ಸಾಕ್ಷಿಯು ನೋಡಿ ಇಲ್ಲ ಎನ್ನುತ್ತಾರೆ.

109 ರ ಆಸ್ತಿ ಮೂಲತಃ ಯಾರದ್ದು ಎಂದು ಕೇಳಲಾಗಿ ಸಾಕ್ಷಿಯು ನನ್ನ ತಂದೆಯದ್ದು ಎಂದು ನುಡಿಯುತ್ತಾರೆ. ತಮ್ಮ ತಂದೆಗೆ ಸೇರಿದ್ದು ಎಂದು ತೋರಿಸಲು ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ತಾವು 109 ಎ ಎಂದು ಸೃಷ್ಟಿಸಿಕೊಂಡಿರುವ ಆಸ್ತಿಯ ವಿಸ್ತೀರ್ಣ ಎಷ್ಟು ಎಂದು

ಕೇಳಲಾಗಿ ಸಾಕ್ಷಿಯು ಪೂರ್ವ-ಪಶ್ಚಿಮ 18 ಅಡಿ ದಕ್ಷಿಣೋತ್ತರ 16 ಅಡಿ ಎಂದು ಹೇಳಿ ಈ ಬಗ್ಗೆ ನಾನು Demand Extract ಹಾಜರು ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸಾಕ್ಷಿಗೆ Demand Extractನ್ನು ತೋರಿಸಿ ವಿಸ್ತೀರ್ಣ 18*16 ಎಂದು ಎಲ್ಲಿ ನಮೂದಾಗಿದೆ ಎಂದು ದಾಖಲೆ ನೋಡಿ ಹೇಳುವಿರಾ ಎಂದು ಕೇಳಲಾಗಿ ಸಾಕ್ಷಿಯು ದಾಖಲೆಯನ್ನು ನೋಡಿ ಇಲ್ಲ ಎನ್ನುತ್ತಾರೆ.

ನಿಪಿ-1 Demand Extract ನ್ನು ನಾನು ಕೇಸಿಗಾಗಿ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ವಿಸ್ತೀರ್ಣಕ್ಕೆ ಅನುಗುಣವಾಗಿ ಕಂದಾಯವನ್ನು ನಿಗಧಿ ಮಾಡಲಾಗುತ್ತದೆ ಎಂದರೆ ಸರಿ. ಅಜ್ಜಪ್ಪರವರ ಹೆಸರಿಗೆ ಖಾತೆ ಆಗಿರುವ ಬಗ್ಗೆ ದಾಖಲೆ ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಸಾಕ್ಷಿಯು ಮುಂದುವರಿದು ನನ್ನ ತಂದೆ ನನಗೆ ದಾವಾ ಆಸ್ತಿಯನ್ನು ಹಂಚಿಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ಅಸಲು ದಾವಾ ಸಂಃ 219/2015 ರಲ್ಲಿ ನ್ಯಾಯಾಲಯದ ನಿಯೋಗಿಯಾಗಿ ಎ.ಡಿ.ಎಲ್.ಆರ್., ಹೆಚ್.ಡಿ.ಕೋಟೆ ಇವರು ಆಸ್ತಿ ನಂಬರ್ 109 ನ್ನು ಅಳತೆ ಮಾಡಲು ನ್ಯಾಯಾಲಯದಿಂದ ನೇಮಕ ಆಗಿದ್ದರು ಎಂದರೆ ಸರಿ. ಎ.ಡಿ.ಎಲ್.ಆರ್ , ಹೆಚ್.ಡಿ.ಕೋಟೆ ಇವರು ಆಸ್ತಿ ನಂಬರ್ 109 ಕ್ಕೆ ಭೇಟಿ ನೀಡಿ ಅಳತೆ ಮಾಡಿ ನಕ್ಷೆ ತಯಾರು ಮಾಡಿರುತ್ತಾರೆ ಎಂದರೆ ಸರಿ.

ಆಸ್ತಿ ನಂಬರ್ 109/ಎ ಅಸ್ಥಿತ್ವದಲ್ಲಿಯೇ ಇಲ್ಲ ಎಂದರೆ ಸರಿಯಲ್ಲ. ನಾನು , ಪಿ.ಡಿ.ಓ ಗ್ರಾಮ ಪಂಚಾಯಿತಿಯವರ ಜೊತೆ ಷರೀಕಾಗಿ ಪ್ರತಿವಾದಿಯರ ವಿರುದ್ಧ ಸುಳ್ಳು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಚೆಕ್ಕುಬಂಧಿಯನ್ನು ತಾವು ನಮೂದಿಸಿದ್ದು ಪಶ್ಚಿಮಕ್ಕೆ ಶಂಕರಪ್ಪರವರಿಗೆ ಸೇರಿದ ಆಸ್ತಿ ಎಂದು ಹೇಳಿದ್ದು ಅದರ ಆಸ್ತಿ ನಂಬರ್ ಹೇಳುವಿರಾ ಎಂದರೆ ಸಾಕ್ಷಿಯು ಅಂದಾಜಿನ ಮೇಲೆ ಆಸ್ತಿನಂಬರ್ 108 ಇರಬಹುದು ಎಂದು ನಾನು ಹೇಳುತ್ತಿದ್ದೇನೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿಯ ದಕ್ಷಿಣ ಭಾಗಕ್ಕೆ ಪ್ರತಿವಾದಿಗೆ ಸೇರಿದ 109 ರ ಆಸ್ತಿ ಎಂದು ಹೇಳಿದ್ದು ಅದನ್ನು ತೋರಿಸಲು ನಕ್ಷ , ವಗೈರೆ ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. 109 ರ ಆಸ್ತಿಯು ವಿಭಾಗ ಆಗಿರುವ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಆಸ್ತಿ ನಂಬರ್ 109/ಎ, ಎಂದು ಆಸ್ತಿಯೇ ಇಲ್ಲದೇ ಇರುವುದರಿಂದ ಪ್ರತಿವಾದಿಯರು ತೊಂದರೆ ಕೊಡುವ ಸಂಭವವೇ ಉದ್ಭವ ಆಗುವುದಿಲ್ಲ ಎಂದರೆ ಸರಿಯಲ್ಲ.

ತಾವು ನ್ಯಾಯಾಲಯಕ್ಕೆ ಒಂದು ಕಂದಾಯ ರಶೀದಿ ಹಾಜರು ಮಾಡಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಗಿದ್ದು ಅದರಲ್ಲಿ ಎ.ಸಿ ಕುಮಾರ ಬಿನ್ ಚೆನ್ನಮಲ್ಲಪ್ಪ ಎಂಬ ಹೆಸರಿನಲ್ಲಿ ಇದ್ದು ಆತ ಯಾರು ಎಂದು ಕೇಳಲಾಗಿ ಸಾಕ್ಷಿಯು ನನ್ನ ಎದುರು ಮನೆಯವನು ಆತನಿಗೆ ನಾನು ಕಂದಾಯ ಕಟ್ಟುವಂತೆ ಹೇಳಿದ್ದೆ ಹಾಗಾಗಿ ಅವನ ಹೆಸರಿಗೆ ರಶೀದಿ ಇರುತ್ತದೆ ಎಂದು ನುಡಿಯುತ್ತಾರೆ. ಕಂದಾಯ ರಶೀದಿಯನ್ನು ಈ ಕೇಸಿಗಾಗಿ ಸೃಷ್ಟಿ ಮಾಡಿ ಹಾಜರು ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಆಸ್ತಿ ನಂಬರ್ 109/ ಎ ಯಲ್ಲಿ ಮನೆ ಕಟ್ಟಿರುತ್ತೇವೆ ಎಂದು ಹೇಳಿದ್ದು ಕಂದಾಯ ಕಟ್ಟಿರುವ ಬಗ್ಗೆ ದಾಖಲೆ ಹಾಜರು ಮಾಡಿರುತ್ತೀರಾ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ನಾನು 109/ಎ, ಆಸ್ತಿಯ ಮಾಲೀಕನಾಗಿ ಸ್ವಾಧೀನದಲ್ಲಿ ಇರುತ್ತೇನೆ ಎಂದು ತಾವು ಹೇಳಿದ್ದು ದಸರಿ ಸದರಿ ಆಸ್ತಿಯು ಅಸ್ಥಿತ್ವದಲ್ಲಿ ಇಲ್ಲದೇ

ಇದ್ದರೂ ನಾನು ಮಾಲೀಕ ಮತ್ತು ಸ್ವಾಧೀನ ಇರುತ್ತೇನೆ ಎಂದು  ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ:</u>**

**(ಸಾಕ್ಷಿದಾರರ  ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಸ ಇ ಒ.,**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**